ಕಥೆ

# ದಾಸ್ ಬಾಬೂ ಅವರ ಇಪ್ಪತ್ತನಾಲ್ಕು ಗಂಟೆ




ಮೂಲ: **ರಮಾನಾಥ್ ರಾಯ್**

ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ರಾಮಕೃಷ್ಣ ಸಿದ್ರಪಾಲ

ನಿತ್ಯ ಕಷ್ಟವಾಗುತ್ತದೆ. ದಾಸ್ ಬಾಬೂ ಅವರಿಂದ ಕಷ್ಟವನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾಧ್ಯವಾಗದಿರುವುದು ಸಹಜ. ಈಗ ಅವರಿಗೆ ಎಪ್ಪತ್ತೈದು ವರ್ಷ. ಈ ವಯಸ್ಸಿನಲ್ಲಿ ಅವರು ನಿತ್ಯ ಬೆಳಗ್ಗೆ ಪೇಟೆಗೆ ಹೋಗಬೇಕಾಗುತ್ತದೆ. ಅಲ್ಲದೆ, ನಿಯಮಿತವಾಗಿ ಎಲೆಕ್ಟ್ರಿಸಿಟಿ ಬಿಲ್‌ನ ಹಣವನ್ನು ಸಂದಾಯ ಮಾಡಬೇಕಾಗುತ್ತದೆ; ಟೆಲಿಫೋನ್ ಬಿಲ್ಲನ್ನೂ ಕಟ್ಟಬೇಕಾಗುತ್ತದೆ. ಮನೆಯ ಕಂದಾಯದ ಬಿಲ್ ಸಹ ಪಾವತಿಸಬೇಕಾಗುತ್ತದೆ. ಅಡುಗೆ ಅನಿಲ ಖಾಲಿಯಾದರೆ, ಗ್ಯಾಸ್ ಅಂಗಡಿಗೆ ಹೋಗಿ, ಈ ಬಗ್ಗೆ ಸೂಚನೆ ಕೊಡಬೇಕಾಗುತ್ತದೆ. ಎಲ್ಲವನ್ನೂ ದಾಸ್ ಬಾಬೂ ಅವರೇ ಮಾಡಬೇಕಾಗುತ್ತದೆ. ಇವೆಲ್ಲದಕ್ಕೆ ಹಣವನ್ನೂ ತಮ್ಮ ಕೈಯಾರೆ ಕೊಡಬೇಕಾಗುತ್ತದೆ. ಮನೆಯ ದುರಸ್ತಿಗೂ ಹಣವನ್ನು ಕೊಡಬೇಕಾಗುತ್ತದೆ. ಮಗ ಮತ್ತು ಸೊಸೆ ಇಬ್ಬರೂ ನೌಕರಿ ಮಾಡುತ್ತಾರೆ. ಅವರಿಗೆ ದೊಡ್ಡ ಮೊತ್ತದ ಸಂಬಳ ಸಿಗುತ್ತದೆ. ಆದರೆ, ಅವರು ಮನೆಗೆ ಒಂದು ನಯಾಪೈಸೆಯನ್ನು ಸಹ ವ್ಯಯಿಸುವುದಿಲ್ಲ. ಮನೆಯ ನೌಕರನಿಗೂ ದಾಸ್ ಬಾಬೂ ಅವರೇ ಸಂಬಳವನ್ನು ಕೊಡುತ್ತಾರೆ. ಸದ್ಯ, ದಾಸ್ ಬಾಬೂ ಅವರಿಗೆ ದೊಡ್ಡ ಮೊತ್ತದ ಪೆನ್‌ಶನ್ ಲಭಿಸುತ್ತದೆ. ಇಲ್ಲದಿದ್ದರೆ ಏನಾಗುತ್ತಿತ್ತೋ ಎಂದು ಯೋಚಿಸಿಯೇ ಅವರು ಕಂಪಿಸುತ್ತಾರೆ. ಆಗಾಗ ಅವರಿಗೆ, ತಾವು ಈ ಮನೆಯನ್ನು ಮಾರಿ ಎಲ್ಲಾದರೂ ಹೋಗಬೇಕು, ತಮ್ಮ ಮಗ ಮತ್ತು ಸೊಸೆಗೆ ಸೂಕ್ತ ಪಾಠವನ್ನು ಕಲಿಸಬೇಕೆಂದು ಅನ್ನಿಸುತ್ತದೆ. ಆದರೆ, ತಮ್ಮ ಹೆಂಡತಿಯ ಮಾತು ಕೇಳುತ್ತಲೇ ಮನಸು ಬದಲಿಸುತ್ತಾರೆ. ಮನೆ ಮತ್ತು ಪರಿವಾರದ ಬಗ್ಗೆ ಅವರ ಹೆಂಡತಿಗೆ ಅಪಾರ ಮೋಹವಿದೆ. ಅದಕ್ಕೇ ಅವರು ತಮ್ಮ ಮನೆ ಮತ್ತು ಈ ಪರಿವಾರವನ್ನು ತ್ಯಜಿಸಿ ಬೇರೆಲ್ಲೂ ಹೋಗಲು ಬಯಸುವುದಿಲ್ಲ. ಹೆಂಡತಿಗೂ ಎಪ್ಪತ್ತು ವರ್ಷ ವಯಸ್ಸಾಗಿದೆ. ಆದರೆ ಅವಳು ಈಗಲೂ ಅಡುಗೆ ಮನೆಯ ಕೆಲಸಗಳನ್ನು ಮಾಡುತ್ತಾಳೆ. ಅವಳು ಈ ಕೆಲಸಕ್ಕೆ ಅಡುಗೆಯವಳನ್ನು ನೇಮಿಸಿಕೊಳ್ಳಲು ಬಯಸುವುದಿಲ್ಲ. ಇದರಿಂದಾಗಿ ದಾಸ್ ಬಾಬೂ ಆಗಾಗ ರೇಗುತ್ತಾರೆ, ಅದೂ-ಇದೂ ಬುದ್ಧಿವಾದ ಹೇಳುತ್ತಾರೆ. ಆದರೆ ಪ್ರಯೋಜನವಾಗುವುದಿಲ್ಲ. ಹೆಂಡತಿ ಒಂದೇ ವಿಧದಲ್ಲಿ ತರ್ಕಿಸುತ್ತಾಳೆ, 'ಅಡುಗೆ ಮಾಡುತ್ತಿರುವುದರಿಂದಲೇ ನನ್ನ ಕೈ-ಕಾಲುಗಳು